**ಪ್ರಧಾನ  ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊಳ್ಳೇಗಾಲ.**

**ಉಪಸ್ಥಿತರು**

**ಶ್ರೀಮತಿ.ನಂದಿನಿ.ಎಂ.ಎನ್. ಬಿ . ಎ ., ಎಲ್ .ಎಲ್ ಬಿ .,**

ಪ್ರಧಾನ ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರ. ದ. ನ್ಯಾ.ದಂ.

**ಅಸಲು ದಾವಾ ಸಂಖ್ಯೆ. 196/2016**

**ದಿನಾಂಕಃ 29 ನೇ ಜನವರಿ 2024**

**ವಾದಿ/ಅರ್ಜಿದಾರರುಃ**          **ಮಣಿ ಮತ್ತು ಇತರರು**

**(ವಾದಿಗಳ  ಪರ ಶ್ರೀ ಎನ್. ಪ್ರಕಾಶ್, ವಕೀಲರು)**

**ವಿರುಧ್ಧ**

**ಪ್ರತಿವಾದಿಗಳು/ಎದುರುದಾರರುಃ**          ಮಾರ್ಕಂಡ ಮತ್ತು ಇತರರು

**( ಪ್ರತಿವಾದಿಗಳ  ಪರ ಶ್ರೀ ಪಿ. ಹೇಮಂತ್ ಕುಮಾರ್  ಮತ್ತು ಎಜಿಪಿ, ವಕೀಲರು)**

| | | |
|---|---|---|
| *i* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ  XXXIX ನಿಯಮ 1 ಮತ್ತು 2 ಹಾಗೂ ಕಲಂ 151 |
| *ii* | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ತಾತ್ಕಾಲಿಕ ತಡೆಯಾಜ್ಞೆಯನ್ನು ಕೋರಿ |
| *iii* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | ***21.03.2023*** |
| *iv* | ಮಧ್ಯಂತರ ಅರ್ಜಿಯ ಸಂಖ್ಯೆ | **ಮಧ್ಯಂತರ ಅರ್ಜಿ ಸಂಖ್ಯೆಃ 9** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | ***29.01.2024*** |

**ಮಧ್ಯಂತರ ಅರ್ಜಿ ಸಂಖ್ಯೆ: 9 ಸಿ. ಪ್ರ. ಸಂ. ಕ್ರಮಾದೇಶ XXXIX ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯ ಮೇಲಿನ ಆದೇಶ**

ಅರ್ಜಿದಾರ/ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 9 ನ್ನು ಸಲ್ಲಿಸಿ ಅದರಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ 5 ನೇ ಪ್ರತಿವಾದಿಗಳಾಗಲಿ ಅಥವಾ ಅವರ ಏಟೆಂಟರುಗಳಾಗಲಿ ದಾವಾ ಇತ್ಯರ್ಥವಾಗುವವರೆಗೂ ಯಾವುದೇ ಕಾಮಗಾರಿಯನ್ನು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯನ್ನು ಆದೇಶಿಸಬೇಕೆಂದು ಕೋರಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಮಧ್ಯಂತರ ಅರ್ಜಿಯ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಾನು ಸದರಿ ದಾವೆಯಲ್ಲಿ 2 ನೇ ವಾದಿಯಾಗಿದ್ದು, ದಾವೆಯನ್ನು ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿದ್ದು, ವಾದಪತ್ರದಲ್ಲಿನ ಅಂಶಗಳನ್ನು ಈ ಅರ್ಜಿಯ ಒಂದು ಭಾಗವೆಂದು ಪರಿಗಣಿಸಬೇಕೆಂತಲೂ, ದಾವಾ ಷೆಡ್ಯೂಲ್ ಸ್ವತ್ತು ಪಿತ್ರಾರ್ಜಿತವಾಗಿ ಬಾಧ್ಯಪಟ್ಟ ಆಸ್ತಿಯಾಗಿರುತ್ತದೆ. 1 ನೇ ಪ್ರತಿವಾದಿಯು ವಾದಿಯರ ತಂದೆಯಾಗಿದ್ದು, ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಎಂ. ಆರ್ 18/1997-98 ರಂತೆ ಒಟ್ಟು ಕುಟುಂಬದಲ್ಲಾದ ವಿಭಾಗದ ಮುಖೇನ ಬಂದಿರುತ್ತದೆ. ಅಂದಿನಿಂದ 1 ನೇ ಪ್ರತಿವಾದಿ ಮತ್ತು ವಾದಿಯಾದ ತಾವುಗಳು ಯಾವುದೇ ವಿಭಾಗವಾಗದೇ ಜಂಟಿಯಾಗಿ ಸ್ವಾಧೀನಾನುಭವದಲ್ಲಿರುತ್ತೇವೆಂತಲೂ, ದಾವಾ ಸ್ವತ್ತುಗಳು ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಯಾಗಿದ್ದು, ವಾದಿಯರಾದ ತಾವುಗಳು ಮತ್ತು 1 ನೇ ಪ್ರತಿವಾದಿ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತೇವೆಂತಲೂ, ಕೆಲವು ವರ್ಷಗಳಿಂದ 1 ನೇ ಪ್ರತಿವಾದಿಯು

ಕುಡಿತ, ಜೂಜುಗಳಂತಹ ಕೆಟ್ಟ ಅವ್ಯಾಸಗಳಿಗೆ ದಾಸರಾಗಿದ್ದು, ದಾವಾ ಸ್ವತ್ತಿನಿಂದ ಬರುವಂತಹ ಆದಾಯಗಳ ಬಗ್ಗೆ ಯಾವುದೇ ಮಾಹಿತಿಯನ್ನು ತಮಗೆ ನೀಡಿರುವುದಿಲ್ಲ. ಈ ಬಗ್ಗೆ 1 ನೇ ಪ್ರತಿವಾದಿಗೆ ದುರಾಭ್ಯಾಸಗಳನ್ನು ಬಿಡುವಂತೆ ಹಲವಾರು ಬಾರಿ ತಿಳುವಳಿಕೆ ನೀಡಿದ್ದಾಗ್ಯೂ, ಅವರು ತಮ್ಮ ದುರಭ್ಯಾಸಗಳನ್ನು ಬಿಟ್ಟಿರುವುದಿಲ್ಲ. ಹೀಗಿರುವಲ್ಲಿ ವಾದಿಯಾದ ತಾವು 1 ನೇ ಪ್ರತಿವಾದಿಯನ್ನು ಭೇಟಿ ಮಾಡಿ ಭಾಗಾಂಶ ಕೊಡುವಂತೆ ಕೋರಿದ್ದು, ಅದಕ್ಕೆ ಅವರು ಒಪ್ಪದ ಕಾರಣದಿಂದಾಗಿ ಪಂಚಾಯ್ತಿ ಸಹ ನಡೆದಿದ್ದು, ಅದಕ್ಕೂ ಸಹ ಒಪ್ಪದ ಕಾರಣ ಬೇರೆ ದಾರಿಯಿಲ್ಲದೆ ದಾವೆಯನ್ನು ಹೂಡಿರುತ್ತೇವೆಂತಲೂ, ಅಲ್ಲದೇ ದಾವಾ ಆಸ್ತಿಯ ದಾಖಲೆಗಳನ್ನು ಸಂಬಂಧಪಟ್ಟ ಕಛೇರಿಯಿಂದ ಪಡೆದು ಸ್ಥಳ ಪರಿಶೀಲನೆ ಮಾಡಿದ ಸಂದರ್ಭದಲ್ಲಿ 5 ನೇ ಪ್ರತಿವಾದಿಗಳಿಗೆ ಸೇರಿದ ಶಾಲಾ ಕಟ್ಟಡವಿರುವುದಾಗಿ ಕಂಡು ಬಂದಿದ್ದು, ಆ ಬಗ್ಗೆ ವಿಚಾರಿಸಲಾಗಿ ಅವರು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ ಬದಲಿಗೆ ಸದರಿ ಶಾಲೆಯನ್ನು ವಿಸ್ತರಿಸುವ ಪ್ರಯತ್ನವನ್ನು ಸಹ ಮಾಡುತ್ತಿರುತ್ತಾರೆ. ಸದರಿ ಪ್ರಯತ್ನದಲ್ಲಿ 5 ನೇ ಪ್ರತಿವಾದಿಯವರು ಸಫಲರಾದಲ್ಲಿ ವಾದಿಯಾದ ತಮಗೆ ತುಂಬಲಾರದ ನಷ್ಟವುಂಟಾಗುತ್ತದೆ. ಪ್ರತಿವಾದಿ 2 ರಿಂದ 5 ರವರಿಗೆ ದಾವಾ ಸ್ವತ್ತಿನಲ್ಲಿ ಶಾಲೆಯನ್ನು ತೆರೆಯಲು ಯಾವುದೇ ಅಧಿಕಾರವಿಲ್ಲದೇ ಹೋದರೂ ತಮಗೆ ತಿಳಿಯದಂತೆ ತೆರೆದಿರುತ್ತಾರೆ. ಸದರಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಎದುರುದಾರರಿಗೆ ಯಾವುದೇ ರೀತಿಯ ಹಾನಿ, ನಷ್ಟ ಭಾದಕವುಂಟಾಗುವುದಿಲ್ಲ ಬದಲಾಗಿ ಪುರಸ್ಕರಿಸದಿದ್ದಲ್ಲಿ ಹೆಚ್ಚಿನ ಹಾನಿಯುಂಟಾಗುತ್ತದೆ ಹಾಗೂ ದಾವಾ ಪ್ರಕ್ರಿಯೆಗಳು ದ್ವಿಗುಣಗೊಳ್ಳುವ ಸಂಭವವಿರುತ್ತದೆ. ಅದರಂತೆ ಈ ಎಲ್ಲಾ ಕಾಗಣಗಳಿಂದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಅದರಂತೆ 2 ರಿಂದ 5 ನೇ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಅಂಶಗಳನ್ನೇ ಸದರಿ ಮಧ್ಯಂತರ ಅರ್ಜಿಗೆ ತಕರಾರೆಂದು ಪರಿಗಣಿಸುವಂತೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮನವಿಯನ್ನು ಸಲ್ಲಿಸಿ, ಅದರಲ್ಲಿ ವಾದಿಯರು ಸಲ್ಲಿಸಿರುವ ದಾವೆಯು ಕಾನೂನಿನ ದೃಷ್ಟಿಯಿಂದ ಊರ್ಜಿತವಾಗಿಲ್ಲದಿರುವುದರಿಂದ ಯಾವುದೇ ರೀತಿಯ ಮಧ್ಯಕಾಲೀನ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿರುವುದಿಲ್ಲ. ವಾದಿಗಳಿಗೆ ದಾವಾ ಸ್ವತ್ತಿನ ಒಂದು ಭಾಗವಾದ ಅಂದರೆ 1 ನೇ ಪ್ರತಿವಾದಿಯು ಶಾಲೆಗೆ ಬಿಟ್ಟುಕೊಟ್ಟಿರುವ 0.40 ಸೆಂಟ್ ಜಮೀನಿನ ಮೇಲೆ ಯಾವುದೇ ಬಗೆಯ ಹಕ್ಕು, ಹಿತಾಸಕ್ತಿ, ಸ್ವಾಧೀನಾನುಭವ ಇರುವುದಿಲ್ಲ. ಸದರಿ ಜಾಗದಲ್ಲಿ ಶಾಲಾ ಕೊಠಡಿ ಹಾಗೂ ಶಾಲೆಗೆ ಅಗತ್ಯವಾದ ಇತರ ಕೊಠಡಿಗಳನ್ನು ನಿರ್ಮಿಸಿ ಶಾಲೆಯನ್ನು ನಡೆಸುತ್ತಿದ್ದು, ಸ್ವಲ್ಪ ಉಳಿಕೆ ಜಾಗ ಇರುತ್ತದೆ. ಶಾಲೆಯನ್ನು ಸುಮಾರು 2003 ನೇ ಸಾಲಿನಿಂದ ನಡೆಸುತ್ತಿದ್ದು, 1 ನೇ ಪ್ರತಿವಾದಿಯು ಶಾಲೆಗೆ ಜಾಗವನ್ನು ಬಿಟ್ಟುಕೊಟ್ಟಿರುವ ವಿಚಾರ ವಾದಿಗಳಿಗೆ ತಿಳಿದಿರುತ್ತದೆ ಶಾಲೆಯವರು ತಮ್ಮ ಮಾಲೀಕತ್ವ ಹಾಗೂ ಸ್ವಾಧೀನಾನುಭದಲ್ಲಿರುವ ಜಾಗದಲ್ಲಿ ಶಾಲೆಗೆ ಅಗತ್ಯವಾದ ಅಡುಗೆ ಕೋಣೆಯನ್ನು ಸರ್ಕಾರದ ಅನುದಾನದಲ್ಲಿ ನಿರ್ಮಾಣ ಮಾಡಲು ಮುಂದಾಗಿರುತ್ತಾರೆಯೇ ವಿನಃ 1 ನೇ ಪ್ರತಿವಾದಿ ಉಳಿಸಿಕೊಂಡಿರುವ ಜಾಗದಲ್ಲಿ ಅಲ್ಲವೆಂತಲೂ, ಪ್ರತಿವಾದಿಗಳ ಕಾನೂನುಬದ್ಧ ಕಾಮಗಾರಿಯನ್ನು ತಡೆಯಬೇಕೆಂಬ ದುರುದ್ದೇಶದಿಂದ ವಾದಿಗಳು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿಯು ಶಾಲೆಗೆ ನೀಡಿರುವ ಜಮೀನಿನ ಮೇಲೆ ವಾದಿಗಳಿಗೆ ಯಾವುದೇ ಬಗೆಯ ಹಕ್ಕು, ಹಿತಾಸಕ್ತಿ ಇಲ್ಲದೆ ಇರುವುದರಿಂದ ಮೇಲ್ನೋಟಕ್ಕೆ ದಾವೆಯು ಪ್ರತಿವಾದಿಗಳ ಪರ ಇರುತ್ತದೆ. ಅರ್ಜಿಯನ್ನು ಪುರಸ್ಕರಿಸಿದಲ್ಲಿ ಶಾಲೆಯವರಿಗೆ ತುಂಬಲಾರದ ಅನ್ಯಾಯವಾಗುತ್ತದೆ. ವಾದಿಗಳಿಗೆ ಪ್ರತಿವಾದಿಗಳ ಕಾನೂನುಬದ್ಧ ನಡವಳಿಕೆಯನ್ನು

ತಡೆಯುವ ಅಧಿಕಾರ ಇಲ್ಲದಿದ್ದಾಗ್ಯೂ ನ್ಯಾಯಾಲಯದ ಆದೇಶದ ದುರುಪಯೋಗ ಮಾಡಿಕೊಂಡು ಪ್ರತಿವಾದಿಗಳಿಗೆ ತೊಂದರೆಯನ್ನು ನೀಡುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಪ್ರತಿವಾದಿಗಳಿಗೆ ಹಾಗೂ ಶಾಲಾ ಮಕ್ಕಳಿಗೆ ಹಾಗೂ ಶಾಲೆಗೆ ತುಂಬಲಾರದ ಅನ್ಯಾಯವಾಗುತ್ತದೆ. ಅರ್ಜಿಯನ್ನು ಪುರಸ್ಕರಿಸಿದಲ್ಲಿ ವಾದಿಗಳಿಗೆ ಯಾವುದೇ ರೀತಿಯ ಅನ್ಯಾಯಾವಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಅರ್ಜಿಯನ್ನು ವಜಾಕರಿಸಬೇಕೆಂದು ಕೋರಿರುತ್ತಾರೆ.

**4.** ಅದರಂತೆ ಉಭಯತ್ರಯರ ಪರ ವಕೀಲರ ಮಧ್ಯಂತರ ಅರ್ಜಿಯ ಮೇಲಿನ ವಾದವನ್ನು ಆಲಿಸಲಾಯಿತು. ನ್ಯಾಯಾಲಯದಲ್ಲಿರುವ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಮತ್ತು ಉಭಯತ್ರಯರ ಅರ್ಜಿ ಮತ್ತು ತಕರಾರನ್ನು ಪರಿಶೀಲಿಸಿ ನ್ಯಾಯಾಲಯದ ವಿವೇಚನೆಗೆ ಈ ಕೆಳಕಂಡ ಅಂಶಗಳ ಪ್ರಶ್ನೆಗಳನು ಉದ್ಭವಾಗಿರುತ್ತದೆ.

***ಅಂಶಗಳು***

*1. ವಾದಿಯರಿಗೆ ತಾತ್ಕಾಲಿಕ ತಡೆಯಾಜ್ಞೆ ಆದೇಶವನ್ನು ಪಡೆಯಲು ದಾವೆಯಲ್ಲಿ ಸಂಭವನೀಯತೆ /ನೈಜತೆಯ ಒಲವು ವಾದಿಯರ ಪರವಾಗಿರುತ್ತದೆಯೇ?*

*2. ದಾವೆಯಲ್ಲಿನ ಅನೂಕೂಲದ ಸಮತೋಲನತೆಯು ವಾದಿಯರ ಪರವಾಗಿರುತ್ತದೇಯೇ?*

*3. ವಾದಿಯರಿಗೆ ತಾತ್ಕಾಲಿಕ ತಡೆಯಾಜ್ಞೆ ಮಂಜೂರು ಮಾಡದಿದ್ದಲ್ಲಿ ತುಂಬಲಾರದ ಹಾನಿ ಮತ್ತು ನಷ್ಟವುಂಟಾಗುತ್ತದೆಯೇ?*

*4. ಯಾವ ಆದೇಶ?*

5. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

ಅಂಶ 1 ರಿಂದ 3ಃ ಸಕಾರಾತ್ಮಕವಾಗಿ

ಅಂಶ 4 ಃ ಅಂತಿಮ ಆದೇಶದಂತೆ

**ಕಾರಣಗಳು**

**6. ಅಂಶ 1 ರಿಂದ 3 ಃ** ಸದರಿ ದಾವೆಯಲ್ಲಿ ನ್ಯಾಯಾಲಯದ ವಿವೇಚನೆಗೆ ಉದ್ಬವಿಸಿರುವ ತಾತ್ಕಾಲಿಕ ತಡೆಯಾಜ್ಞೆಯ ಆದೇಶಕ್ಕೆ ಸಂಬಂಧಿಸಿದಂತೆ ಉದ್ಭವಾದ ನೈಜತೆಯ ಒಲವು, ಅನುಕೂಲದ ಸಮತೋಲನತೆ ಹಾಗೂ ತುಂಬಲಾರದ ಹಾನಿ ಅಥವಾ ನಷ್ಟ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪ್ರತ್ಯೇಕವಾಗಿ ಉತ್ತರಿಸುವ ಅಗತ್ಯವಿರುವುದಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯಪಟ್ಟು ಒಟ್ಟಾರೆಯಾಗಿ ಚರ್ಚಿಸಿ ಉತ್ತರಿಸಲಾಗಿರುತ್ತದೆ. ಪ್ರಸ್ತುತ ದಾವೆಯನ್ನು ವಾದಿಯರು ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಹೂಡಿರುವುದಾಗಿ ಕಂಡುಬರುತ್ತದೆ. ಸದರಿ ದಾವೆಯಲ್ಲಿನ ವಾದಿಗಳು 1 ನೇ ಪ್ರತಿವಾದಿಯ ಮಕ್ಕಳಾಗಿರುವ ಬಗ್ಗೆ ಯಾವುದೇ ವಿವಾದವಿರುವುದಿಲ್ಲ ಎಂಬುದಾಗಿ ಪ್ರತಿವಾದಿ 2 ರಿಂದ 5 ರವರು ಲಿಖಿತ ಹೇಳಿಕೆಯಲ್ಲಿ ಸಂಬಂಧವನ್ನು ಅಲ್ಲಗಳೆಯದೇ ಇರುವುದರಿಂದ ಕಂಡುಬರುತ್ತದೆ. ಅದೇ ರೀತಿ ವಾದಿಯರು ದಾವಾ ಷೆಡ್ಯೂಲ್ ಆಸ್ತಿ 1 ನೇ ಪ್ರತಿವಾದಿಗೆ ಅವರ ಕುಟುಂಬದ ವಿಭಾಗದಂತೆ ಎಂ ಆರ್ 18/1997-98 ರಂತೆ ಬಂದಿದ್ದು, ವಾದಿಗಳಾದ ತಮ್ಮ ನಡುವೆ ಮತ್ತು 1 ನೇ ಪ್ರತಿವಾದಿಯ ನಡುವೆ ಯಾವುದೇ ವಿಭಾಗವಾಗಿರುವುದಿಲ್ಲ. ವಾದಿಯಾದ ತಾವುಗಳು ಮತ್ತು 1 ನೇ ಪ್ರತಿವಾದಿ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತೇವೆ ಎಂಬುದಾಗಿ, 1 ನೇ ಪ್ರತಿವಾದಿಯು ಕೆಲವು ಕೆಟ್ಟ ಹವ್ಯಾಸಗಳಿಗೆ ದಾಸರಾಗಿದ್ದು, ದಾವಾ ಸ್ವತ್ತಿನಿಂದ ಬರುವಂತಹ

ಆದಾಯಗಳ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ಅಲ್ಲದೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಕಛೇರಿಯಿಂದ ದಾಖಲೆ ಪರಿಶೀಲನೆ ಮಾಡಿದ ಸಂದರ್ಭದಲ್ಲಿ 5 ನೇ ಪ್ರತಿವಾದಿಗಳಿಗೆ ಸೇರಿರುವ ಶಾಲಾ ಕಟ್ಟಡವಿರುವುದಾಗಿ ಕಂಡುಬಂದಿರುತ್ತದೆ. 5 ನೇ ಪ್ರತಿವಾದಿಯವರು ಶಾಲೆಯನ್ನು ವಿಸ್ತರಿಸುವ ಪ್ರಯತ್ನವನ್ನು ಮಾಡುತ್ತಿರುತ್ತಾರೆ. ಈ ಕಾರಣದಿಂದಾಗಿ ತಾತ್ಕಾಲಿಕ ತಡೆಯಾಜ್ಞೆ ಮಂಜೂರು ಮಾಡಬೇಕೆಂದು ವಾದ ಮಂಡಿಸಿರುತ್ತಾರೆ.

**7.** ಅದೇ ರೀತಿ ಪ್ರತಿವಾದಿ 2 ರಿಂದ 5 ರವರ ಪರ ವಕೀಲರು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿನ ವಿಸ್ತೀರ್ಣ 0.40 ಸೆಂಟ್ ಜಮೀನನ್ನು 1 ನೇ ಪ್ರತಿವಾದಿಯು ಶಾಲೆಗೆ ಬಿಟ್ಟುಕೊಟ್ಟಿದ್ದು , ಸದರಿ ಜಾಗದಲ್ಲಿ ಶಾಲಾ ಕೊಠಡಿ ಹಾಗೂ ಇತರೆ ಅಗತ್ಯವಾದ ಕೊಠಡಿಗಳನ್ನು ನಿರ್ಮಿಸಿ ಶಾಲೆಯನ್ನು ನಡೆಸುತ್ತಿರುವ ವಿಚಾರ ವಾದಿಗಳಿಗೆ 2003 ರಿಂದಲೂ ತಿಳಿದಿರುತ್ತದೆ. ಶಾಲೆಗೆ ಅಗತ್ಯವಾದ ಅಡುಗೆ ಕೋಣೆಯನ್ನು ಸರ್ಕಾರದ ಅನುದಾನದಲ್ಲಿ ನಿರ್ಮಾಣ ಮಾಡಲು ಮುಂದಾಗಿರುವಾಗ್ಗೆ ಪ್ರತಿವಾದಿಗಳ ಕಾನೂನುಬದ್ಧ ಕಾಮಗಾರಿಯನ್ನು ತಡೆಯಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಗಳಿಗೆ ದಾವಾ ಷೆಡ್ಯೂಲ್ ಸ್ವತ್ತಿನ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಸ್ವಾಧೀನವಿರುವುದಿಲ್ಲ. ಅರ್ಜಿಯನ್ನು ವಜಾಕರಿಸಲು ಸೂಕ್ತ ಕಾರಣಗಳಿರುತ್ತದೆ. ಅದರಂತೆ ವಜಾಕರಿಸಬೇಕೆಂದು ವಾದ ಮಂಡಿಸಿರುತ್ತಾರೆ.

**8.** ಅದರಂತೆ ಉಭಯತ್ರಯರ ವಾದ ಮತ್ತು ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಕಂಡುಬರುವ ಅಂಶಗಳೆಂದರೆ ದಾವಾ ಷೆಡ್ಯೂಲ್ ಸ್ವತ್ತು 1 ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಿರುವ ಬಗ್ಗೆ 1997-98, 2001-02 ಮತ್ತು

2002-03, 2016-17 ನೇ ಸಾಲಿನ ಪಹಣಿ ಪತ್ರಿಕೆಗಳಲ್ಲಿ ಮಾರ್ಕಂಡ ಬಿನ್ ಲೇಟ್. ಪೊನ್ನಸ್ವಾಮಿ ಎಂ ಆರ್ 18/1997-98 ಎಂಬುದಾಗಿ ನಮೂದಿರುವುದರಿಂದ ದಾವಾ ಷೆಡ್ಯೂಲ್ ಸ್ವತ್ತು 1 ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಿರುವ ಬಗ್ಗೆ ಮೇಲ್ನೋಟಕ್ಕೆ ಸದರಿ ದಾಖಲೆಗಳಿಂದ ಕಂಡುಬರುತ್ತದೆ. ಹೀಗಿರುವಲ್ಲಿ ದಾವಾ ಸ್ವತ್ತಿನಲ್ಲಿ ವಾದಿಗಳು 1 ನೇ ಪ್ರತಿವಾದಿಯ ಮಕ್ಕಳಾಗಿರುವುದರಿಂದ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಜಂಟಿ ಹಕ್ಕುದಾರಿಕೆಯನ್ನು ಹೊಂದಿರುವ ಬಗ್ಗೆ ನ್ಯಾಯಾಲಯಕ್ಕೆ ಕಂಡು ಬರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ಪಿತ್ರಾರ್ಜಿತ ಮತ್ತು ಹಿಂದೂ ಅವಿಭಕ್ತ ಕುಟುಂಬದ ಸ್ವತ್ತಾಗಿದ್ದಂತಹ ಸಂದರ್ಭದಲ್ಲಿ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಸ್ವಕುಟುಂಬದ ಸದಸ್ಯರ ವಿರುದ್ಧ ಮಂಜೂರು ಮಾಡಲಾಗದು ಎಂಬುದಾಗಿ ಕಾನೂನಿನ ತತ್ವವಿರುತ್ತದೆ. ಆದರೆ ಸದರಿ ದಾವೆಯಲ್ಲಿ ವಾದಿಗಳು 1 ನೇ ಪ್ರತಿವಾದಿಯ ವಿರುದ್ಧವಾಗಿ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಕೋರುತ್ತಿರುವುದಿಲ್ಲ. ಬದಲಿಗೆ ಪ್ರತಿವಾದಿ 2 ರಿಂದ 5 ಕುಟುಂಬದ ಸದಸ್ಯರಾಗಿರದೇ ಇರುವುದರಿಂದ ಸದರಿ ಪ್ರತಿವಾದಿ 2 ರಿಂದ 5 ರವರ ಮೇಲೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ವಾದಿಯರು ಕೋರಬಹುದಾಗಿರುತ್ತದೆ. ಪ್ರತಿವಾದಿ 2 ರಿಂದ 5 ರವರು ದಾವಾ ಸ್ವತ್ತಿನಲ್ಲಿ ವಿಸ್ತೀರ್ಣ 0.40 ಸೆಂಟ್ ಜಮೀನನ್ನು 1 ನೇ ಪ್ರತಿವಾದಿಯು ಶಾಲೆಗೆ ಬಿಟ್ಟುಕೊಟ್ಟಿದ್ದು, ಅದರಲ್ಲಿ ಈಗಾಗಲೇ ಶಾಲಾ ಕೊಠಡಿ ನಿರ್ಮಿಸಿ ಶಾಲೆಯನ್ನು 2003 ರಿಂದ ನಡೆಸುತ್ತಿರುವುದಾಗಿ ತಕರಾರನ್ನು ಸಲ್ಲಿಸಿರುವುದನ್ನು ಪರಿಶೀಲಿಸಲಾಗಿ 1 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ವಿಸ್ತೀರ್ಣ 0.40 ಸೆಂಟ್ ಜಮೀನನ್ನು ಬಿಟ್ಟುಕೊಟ್ಟ ಬಗ್ಗೆ ಯಾವುದೇ ನೊಂದಾಯಿತ ದಾಖಲೆಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಪ್ರಯತ್ನ ಮಾಡಿರುವುದಿಲ್ಲ.

**9.** ಹೀಗಿದ್ದಾಗ್ಯೂ ಪ್ರತಿವಾದಿ 2 ರಿಂದ 5 ರವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ದಾವಾ ಆಸ್ತಿಯಲ್ಲಿ ಸರ್ಕಾರಿ ಶಾಲೆ ಇರುವುದಾಗಿ ಪೋಟೋಗಳು ಮತ್ತು ಪತ್ರಿಕಾ ವರದಿಯ ದಾಖಲೆಗಳಿಂದಾಗಿ ಹಾಗೂ ವಾದಿಯರೇ ವಾದ ಪತ್ರದಲ್ಲಿ ಮತ್ತು ಮಧ್ಯಂತರ ಅರ್ಜಿಯ ಪ್ರಮಾಣ ಪತ್ರದಲ್ಲಿ ಶಾಲೆಯ ಕಟ್ಟಡ ಇರುವ ಬಗ್ಗೆ ತಿಳಿಸಿರುವುದರಿಂದಾಗಿ ದಾವಾ ಆಸ್ತಿಯಲ್ಲಿ ಶಾಲಾ ಕಟ್ಟಡ ಇರುವುದಾಗಿ ನ್ಯಾಯಾಲಯ ಅಭಿಪ್ರಾಯಪಡುತ್ತದೆ. ಹೀಗಿರುವಲ್ಲಿ ಪ್ರತಿವಾದಿ 2 ರಿಂದ 5 ರವರು ದಾವಾ ಆಸ್ತಿಯಲ್ಲಿ ಕಾಮಗಾರಿಯನ್ನು ಮಾಡಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದ್ದು, ಅದಕ್ಕೆ ಪೂರಕವಾಗಿ ಪ್ರತಿವಾದಿ 2 ರಿಂದ 5 ರವರು ತಕರಾರಿನಲ್ಲಿ ಸರ್ಕಾರದ ಅನುದಾನದಲ್ಲಿ ಅಡುಗೆ ಕೋಣೆ ನಿರ್ಮಿಸಲು ಮುಂದಾಗಿರುವುದಾಗಿ ತಿಳಿಸಿರುವ ಅಂಶದಿಂದಲೂ ಮತ್ತು ಪೋಟೋದಲ್ಲಿನ ದಾಖಲೆಯಲ್ಲಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪೂಜಾ ಕಾರ್ಯ ಮಾಡುತ್ತಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡುಬರುತ್ತದೆ. ಅಲ್ಲದೇ ವಾದಿಯರ ಪರ ವಕೀಲರು ಮೆಮೋ ಮೂಲಕ ಕೆಲವು ಪೊಟೋಗಳನ್ನು ಸಲ್ಲಿಸಿದ್ದು, ಸದರಿ ಪೋಟೋಗಳನ್ನು ಪರಿಶೀಲಿಸಲಾಗಿ ಶಾಲೆಗೆ ಸಂಬಂಧಿಸಿದಂತೆ ಹಳೆಯ ಶಾಲೆಯಿದ್ದು ಸದರಿ ಶಾಲೆಯು ಶಿಥಿಲಗೊಂಡಿದ್ದು, ಶಾಲೆಯನ್ನು ಹಾಗೆಯೇ ಪಾಳು ಬಿಟ್ಟಿದ್ದು ಯಾವ ಕಾರಣಕ್ಕಾಗಿ ಹಳೇ ಸರ್ಕಾರಿ ಶಾಲೆಯನ್ನು ನವೀಕರಿಸಿರುವುದಿಲ್ಲ ಹಾಗೂ ಸದರಿ ಶಾಲೆಯನ್ನು ಹಾಗೆ ಪಾಳು ಬಿಟ್ಟಿರುವುದು ಪೋಟೋಗಳಿಂದ ಕಂಡುಬರುತ್ತದೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿವಾದಿ 2 ರಿಂದ 5 ರವರು ಯಾವುದೇ ಸಮರ್ಪಕ ಉತ್ತರವನ್ನು ನೀಡಿರುವುದಿಲ್ಲ. ಒಂದು ವೇಳೆ ಕಟ್ಟಡವನ್ನು ಕಟ್ಟಲು ಮುಂದಾದಾಗ ಸರ್ಕಾರದಿಂದ ಮಂಜೂರಾದ ಹಣಕ್ಕೆ ಸಂಬಂಧಿಸಿದಂತೆ ಹಾಗೂ ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ವಾದಿಗಳಿಗೆ ಒಟ್ಟು ಕುಟುಂಬದ ಹಕ್ಕು ಹಿತಾಸಕ್ತಿ ಇರುವುದಾಗಿ ಒಂದು ವೇಳೆ

ದಾವೆಯ ಅಂತಿಮ ತೀರ್ಮಾನವಾದಲ್ಲಿ ಕಂಡುಬಂದ ಪಕ್ಷದಲ್ಲಿ ಸರ್ಕಾರದ ಅನುದಾನದ ಹಣವು ನಷ್ಟ ಉಂಟಾಗುವ ಸಾಧ್ಯತೆ ಇದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗುವುದನ್ನು ಪರಿಗಣಿಸಿ, ಈ ಹಂತದಲ್ಲಿ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಮಂಜೂರು ಮಾಡಲು ಸಂಭವನೀಯತೆಯ ಒಲವು ವಾದಿಯರ ಪರವಾಗಿರುವುದಾಗಿ, ಅಲ್ಲದೇ ಅನುಕೂಲದ ಸಮತೋಲನತೆಯು ವಾದಿಯರ ಪರವಾಗಿರುವುದರಿಂದ ತಾತ್ಕಾಲಿಕ ತಡೆಯಾಜ್ಞೆಯ ಆದೇಶ ಮಂಜೂರು ಮಾಡದಿದ್ದಲ್ಲಿ ಪ್ರತಿವಾದಿ 2 ರಿಂದ 5 ರವರು ಕಾಮಗಾರಿಯನ್ನು ಹೊಸದಾಗಿ ಮಾಡುವ ಸಾಧ್ಯತೆಗಳಿರುರುವುದರಿಂದ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಆದೇಶಿಸುವುದು ಸೂಕ್ತವೆಂದು ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಪ್ರತಿವಾದಿ 2 ರಿಂದ 5 ರವರು ಸರ್ಕಾರಿ ಸ್ವಾಮಿತ್ವದಲ್ಲಿನ ಪಕ್ಷಗಾರರಾಗಿದ್ದು, ಸರ್ಕಾರದಿಂದ ಶಾಲೆಯನ್ನು ನಿರ್ಮಿಸಬೇಕಾದಲ್ಲಿ 1 ನೇ ಪ್ರತಿವಾದಿಯಿಂದ ಕಾನೂನುಬದ್ಧವಾಗಿ ಕ್ರಯಪತ್ರದ ಮೂಲಕ ಖರೀದಿಸದೇ ಕೇವಲ ಬಿಟ್ಟು ಕೊಟ್ಟಿರುತ್ತಾರೆಂಬುದಾಗಿ ಅದರಂತೆ ಶಾಲೆ ನಿರ್ಮಾಣ ಮಾಡಿ 2003 ರಿಂದಲೂ ಶಾಲೆ ನಡೆಸುತ್ತಿರುವುದನ್ನು ಆಧರಿಸಿ ಪುನಃ ಹೊಸದಾಗಿ ಕಾಮಗಾರಿಯನ್ನು ಖಾಸಗಿ ಸ್ವತ್ತಿನಲ್ಲಿ ಮಾಡುವಂತೆ ನಿರ್ದೇಶಿಸಿ ಅದರಂತೆ ಮಧ್ಯಂತರ ಅರ್ಜಿಯನ್ನು ವಜಾಕರಿಸುವುದು ಸೂಕ್ತವಲ್ಲವೆಂದು ನ್ಯಾಯಾಲಯ ಅಭಿಪ್ರಾಯಪಟ್ಟು ವಾದಿಯರು ದಾವಾ ಸ್ವತ್ತಿನಲ್ಲಿ ಈಗಾಗಲೇ ಶಾಲಾ ಕಟ್ಟಡವಾಗಿ ಶಾಲೆ ನಡೆಯುತ್ತಿರುವುದರಿಂದ ಸದರಿ ಶಾಲೆ ನಡೆಸಲು ಯಾವುದೇ ರೀತಿಯ ತೊಂದರೆ ನೀಡದಂತೆ ವಾದಿಗಳಿಗೆ ನಿರ್ದೇಶಿಸಿ, ಅದೇ ರೀತಿ ಪ್ರತಿವಾದಿ 2 ರಿಂದ 5 ರವರು ದಾವಾ ಇತ್ಯರ್ಥವಾಗುವವರೆಗೂ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಕಾಮಗಾರಿಯನ್ನು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಆದೇಶಿಸುವುದು ಸೂಕ್ತವೆಂದು ಅಭಿಪ್ರಾಯ ಪಟ್ಟು

ಅಲ್ಲದೇ ಈಗಾಗಲೇ ಪ್ರಸ್ತುತ ದಾವೆಯು 2016 ನೇ ಇಸವಿಯ ದಾವೆಯಾಗಿದ್ದು, ವಾದಿಯ ಪರ ವಿಚಾರಣೆಯಾಗಿದ್ದು ಪಕ್ಷಗಾರರ ಹಕ್ಕು ಹಿತಾಸಕ್ತಿಯನ್ನು ನಿರ್ಧರಿಸಲು ಹಾಗೂ ಶಾಲಾ ಮಕ್ಕಳ ಹಿತದೃಷ್ಟಿಯಿಂದ ದಾವೆಯನ್ನು ಶೀಘ್ರ ವಿಲೇವಾರಿಗಾಗಿ ಉಭಯ ಪಕ್ಷಗಾರರು ನ್ಯಾಯಾಲಯಕ್ಕೆ ಸಹಕರಿಸಬೇಕೆಂದು ನಿರ್ದೇಶಿಸಿ **ಅಂಶ 1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.**

**10. ಅಂಶ 4ಃ** ಮೇಲೆ ಹೇಳಿದ ಕಾರಣಗಳಿಂದಾಗಿ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ**

*ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 9 ಸಿವಿಲ್ ಪ್ರಕ್ರಿಯ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ಪುರಸ್ಕರಿಸಲಾಯಿತು.*

*ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ 5 ನೇ ಪ್ರತಿವಾದಿಯವರಾಗಲಿ ಅಥವಾ ಅವರ ಏಟೆಂಟರಾಗಲಿ ದಾವಾ ಇತ್ಯರ್ಥವಾಗುವವರೆಗೂ ಯಾವುದೇ ಕಾಮಗಾರಿಯನ್ನು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ವಾದಿಗಳಿಗೆ ಆದೇಶಿಸಲಾಯಿತು.*

(**ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 29 ನೇ ಜನವರಿ 2024 ರಂದು ಉಚ್ಚರಿಸಲಾಯಿತು**)

**(ಶ್ರೀಮತಿ. ನಂದಿನಿ.ಎಂ.ಎನ್ )**
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

**(ಪ್ರತ್ಯೇಕ ಆದೇಶವನ್ನು ಮುಕ್ತ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)**

**ಆದೇಶ**

*ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 9 ಸಿವಿಲ್ ಪ್ರಕ್ರಿಯ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ಪುರಸ್ಕರಿಸಲಾಯಿತು.*

*ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ 5 ನೇ ಪ್ರತಿವಾದಿಯವರಾಗಲಿ ಅಥವಾ ಅವರ ಏಟೆಂಟರಾಗಲಿ ದಾವಾ ಇತ್ಯರ್ಥವಾಗುವವರೆಗೂ ಯಾವುದೇ ಕಾಮಗಾರಿಯನ್ನು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ವಾದಿಗಳಿಗೆ ಆದೇಶಿಸಲಾಯಿತು.*

**(ಶ್ರೀಮತಿ. ನಂದಿನಿ.ಎಂ.ಎನ್ )**
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

**For further chief of PW1 by 15.02.2024**

**C/C Addl Civil Judge & JMFC.,**
**Kollegal.**